ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 22- 26
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕ ಏಕೀಕರಣ ಚಳುವಳಿ: ಅ.ನ.ಕೃಷ್ಣರಾಯರ ಚಿಂತನೆ

**ಶಶಿಧರ ಎಸ್***

*ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು.

***Abstract:***

*ಕರ್ನಾಟಕ ಮತ್ತು ಕನ್ನಡಕ್ಕಾಗಿ ಅವಿರತವಾಗಿ ತನ್ನ ಬರಹ ಮತ್ತು ಭಾಷಣಗಳ ಮೂಲಕ ಕನ್ನಡಿಗರನ್ನ ಬಡಿದೆಬ್ಬಿಸಿದ ಅನೇಕ ಮಹನೀಯರಲ್ಲಿ ಅ.ನ.ಕೃ ಎಂದೇ ಖ್ಯಾತರಾದ ಅ.ನ.ಕೃಷ್ಣರಾಯರವರ ಪಾತ್ರ ಬಹಳ ಮಹತ್ವದಾಗಿದೆ. ಅವರ ಉಜ್ವಲ ಭಾಷಣಗಳು ಇಂದಿಗೂ ಸಹಹ್ರಾರು ಜನರ ಕಿವಿಯಲ್ಲಿ ಮೊರೆಯುತ್ತಿವೆ. ಅವರ ವ್ಯಕ್ತಿತ್ವ, ವೈವಿಧ್ಯಮಯ ಸಾಧನೆ ಅದ್ವೀತಿಯವಾದದ್ದು. ಅ.ನ.ಕೃ ರವರ ಕಾದಂಬರಿ, ನಾಟಕ, ಸಣ್ಣಕಥೆ, ಪ್ರಬಂಧ, ಅನುವಾದ, ಜೀವನ ಚರಿತ್ರೆಗಳು, ಲೇಖನಗಳು ಇಂದಿಗೂ ಅಜರಾಮರವಾಗಿವೆ. ಇವರು ಕರ್ನಾಟಕ ಏಕೀಕರಣಕ್ಕೆ ನೀಡಿದ ವಿಶಿಷ್ಟ ಕೊಡುಗೆಯನ್ನು ಇತಿಹಾಸದ ದಾಖಲೆಗಳಿಂದ ಹೊರತರಬೇಕಾದದ್ದು ಅಗತ್ಯವಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕರ್ನಾಟಕ, ಏಕೀಕರಣ, ಅ.ನ.ಕೃ, ಹೋರಾಟ.*

## ಪೀಠಿಕೆ

ಕನ್ನಡಿಗರನ್ನು ಕರ್ನಾಟಕದ ಏಕೀಕರಣಕ್ಕೆ ಒಗ್ಗೂಡುವಂತೆ ಕರೆ ನೀಡಿ, ತಮ್ಮ ಅಮೋಘ ಭಾಷಣಗಳಿಂದ ಪ್ರೇರೇಪಿಸಿ, ಹುರಿದುಂಬಿಸಿ ಕನ್ನಡಿಗರ **ಆತ್ಮಾ**ಭಿಮಾನ ಕೆರಳುವಂತೆ ಮಾಡಿದ ಕೀರ್ತಿ ಅ.ನ.ಕೃ**ಷ್ಣರಾಯ**ರವರದ್ದು. ಇವರ ಕೃತಿಗಳಲ್ಲಿ ಪ್ರಮುಖವಾದ ಕನ್ನಡ ಕುಲರಸಿಕರು, ಕರ್ನಾಟಕದ ಹಿತ ಚಿಂತನೆ, ಕನ್ನಡದ ದಾರಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಅಖಂಡ ಕರ್ನಾಟಕ, ಕನ್ನಡಮ್ಮನ ಗುಡಿಯಲ್ಲಿ, ಮುಂತಾದ ಪ್ರಬಂಧ, ಲೇಖನಗಳಲ್ಲಿ ಕರ್ನಾಟಕದ ಬಗ್ಗೆ ಹಾಗೂ ಏಕೀಕರಣದ ಬಗ್ಗೆ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಅ.ನ.ಕೃ ರವರ ಸಂಪಾದ**ಕ**ತ್ವದಲ್ಲಿ ಪ್ರಕಟವಾಗುತ್ತಿದ್ದ ಕಥಾಂಜಲಿ (1928), ಕನ್ನಡನುಡಿ (1926), ವಿಶ್ವವಾಣಿ (1936), ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (1944) **ಮುಂತಾದ** ಪತ್ರಿಕೆಗಳಲ್ಲಿ ಕರ್ನಾಟಕ, ಕನ್ನಡ ಹೋರಾಟದ ಬಗ್ಗೆ ಹಲವು ಲೇಖನಗಳನ್ನ ಬರೆಯುವ ಮೂಲಕ ಕನ್ನಡಿಗರನ್ನು ಏಕೀಕರಣಕ್ಕಾಗಿ ಹೋರಾಡಲು ಮನ ಪೂರ್ವಕವಾಗಿ ಸಿದ್ದರಾಗುವಂತೆ ಮಾಡುವಲ್ಲಿ ಪ್ರಭಾವ ಬೀರಿದರು.

ಅ.ನ.ಕೃ ರವರ ಕನ್ನಡದ ದಾರಿ ಮತ್ತು ಅಖಂಡ ಕರ್ನಾಟಕ ಎಂಬ ಕೃತಿಯಲ್ಲಿ ಕರ್ನಾಟಕ ಮತ್ತು ಕನ್ನಡದ ಬಗ್ಗೆ ಅಂದಿನ ದಿನಪತ್ರಿಕೆಗಳಲ್ಲಿ ಮೂಡಿ ಬಂದ ಇವರ ಸಂಪಾದಕತ್ವದ ಹಲವು ಲೇಖನಗಳ ಗುಚ್ಚವನ್ನು ಹೊಂದಿದೆ. ಇವುಗಳ ಮೂಲಕ ಕರ್ನಾಟಕ ಏಕೀಕರಣದ ಹಾದಿಯಲ್ಲಿ ಅ.ನ.ಕೃ

***Please cite this article as:*** ಶಶಿಧರ ಎಸ್. (2022). ಕರ್ನಾಟಕ ಏಕೀಕರಣ ಚಳುವಳಿ: ಅ.ನ.ಕೃಷ್ಣರಾಯರ ಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(4), 22–26.

ರವರ ದೃಷ್ಟಿಕೋನ ಮತ್ತು ನಿಲುವುಗಳನ್ನ ತಿಳಿಯಬಹುದಾಗಿದೆ. ಅಖಂಡ ಕರ್ನಾಟಕ ಕೃತಿಯ ಮುನ್ನುಡಿಯಲ್ಲಿ ಕರ್ನಾಟಕ ಏಕೀಕರಣದ ಅವಶ್ಯಕತೆ ಮತ್ತು ಅದು ಸಾಗಬೇಕಾದ ರೀತಿಯನ್ನು ಕನ್ನಡಿಗರ ಹೃದಯದಲ್ಲಿ ಗೂಡುಕಟ್ಟುವಂತೆ ಮಾಡಿದರು. 'ನಮ್ಮ ವಿದ್ಯಾರ್ಥಿಗಳು ಈ ಚಳುವಳಿಯಲ್ಲಿ ಕೈಯಿಕ್ಕಬೇಕು. ಏಕೀಕರಣದ ಪ್ರಶ್ನೆ ಒಂದು ಪಕ್ಷದ್ದಲ್ಲ, ಒಂದು ಜಿಲ್ಲೆಯದ್ದಲ್ಲ, ಒಂದು ಸಂಸ್ಥಾನದ್ದಲ್ಲ. ಇದು ಅಖಂಡ ಕರ್ನಾಟಕದ ಭವಿಷ್ಯತ್ತನ್ನು ನಿರ್ಧರಿಸುವ ಮಹಾ ಪ್ರಶ್ನೆ. ರಾಜಕೀಯ ಪಕ್ಷಗಳ ಸೂತ್ರದ ಗೊಂಬೆಗಳಾಗಿರುವ ವಿದ್ಯಾರ್ಥಿ ಸಂಸ್ಥೆಗಳು ಒಂದುಗೂಡಿ ಕರ್ನಾಟಕ ಏಕೀಕರಣ ಕೆಲಸವನ್ನು ಕೈಗೊಳ್ಳಬೇಕು.'[1] ಹೀಗೆ ಏಕೀಕರಣದ ಸಮಯದಲ್ಲಿ ಅಖಂಡ ಕರ್ನಾಟಕದ ಸಾಧನೆಗೆ ತಮ್ಮ ಬರಹಗಳ ಮೂಲಕ ಕನ್ನಡಿಗರನ್ನು ಎಚ್ಚರಗೊಳಿಸುವ ಇವರ ಕಾರ್ಯ ಅತ್ಯಂತ ಮಹತ್ವದಾಗಿದೆ. ಇವರ ಮತ್ತೊಂದು ಆಶಯದಲ್ಲಿ 'ಕರ್ನಾಟಕ ನಾಲ್ಕು ಬಗೆಯ ಶತ್ರುಗಳನ್ನು ಎದುರಿಸಬೇಕಾಗಿದೆ ಅವುಗಳೆಂದರೆ ಮೊದಲನೆಯದು ಸರ್ವಾಧಿಕಾರವನ್ನು ಕೈಯಲ್ಲಿಟ್ಟುಕೊಂಡು ಭಾರತವನ್ನೇ ತಮ್ಮ ಅಡಿಯಾಳಾಗಿ ವಿರೋಧಿಸುವ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಪಕ್ಷಗಳ ಕೆಲವು ನಾಯಕರು, ಎರಡನೆಯದು ತಮ್ಮ ತಮ್ಮ ಪ್ರಾಂತ್ಯಗಳ ಪ್ರಭಾವಿ ವಿಸ್ತೀರ್ಣಕ್ಕಾಗಿ ಕನ್ನಡಿಗರ ಆಸೆ ಆಶಯಗಳನ್ನು ವಿರೋಧಿಸುವ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಪಕ್ಷಗಳ ಕೆಲವು ನಾಯಕರು, ಮೂರನೆಯದು ಕರ್ನಾಟಕದಲ್ಲಿ ಬಂದು ನೆಲೆಸಿ ಕನ್ನಡಿಗರ ವಿರುದ್ಧವಾಗಿ ಆಚರಿಸುವ ಬೇರೆ ಪ್ರಾಂತ್ಯದವರು, ಮತ್ತು ನಾಲ್ಕನೆಯದು ಹೊರಗಿನವರೊಂದಿಗೆ ಕೂಡಿಕೊಂಡು ಕರ್ನಾಟಕದ ಹಿತವನ್ನು ಸ್ವಾರ್ಥಕ್ಕಾಗಿ ಬಲಿಕೊಡುವ ಕನ್ನಡಿಗರು.

ಇವರ ಅನೀತಿ ವ್ಯಾಪಾರ ನಿಲ್ಲಬೇಕಾದರೆ ಕನ್ನಡಿಗರು ಸಂಘಟಿತರಾಗಬೇಕು.[2] ಇವರ ಈ ಆಶಯವು ಅಂದಿನ ಕನ್ನಡಿಗರಲ್ಲಿ ತಮ್ಮ ಗುರಿ ಏನಾಗಿರಬೇಕು? ಕರ್ನಾಟಕವನ್ನು ಒಗ್ಗೂಡಿಸಲು ಅಡ್ಡಿಯಿರುವ ಅಂಶಗಳಾವುವು? ಯಾವ ರೀತಿ ಹೋರಾಡಬೇಕು ಎಂಬುದನ್ನು ಅರ್ಥ ಮಾಡಿಸುವಲ್ಲಿ ಅ.ನ.ಕೃ ರವರ ಬರಹಗಳು ಮಹತ್ವ ಪೂರ್ಣವಾದುದ್ದಾಗಿವೆ.

ಕನ್ನಡಿಗರ ಸ್ವಾಭಿಮಾನ ಎಂಬ ಶೀರ್ಷಿಕೆಯಲ್ಲಿ ಕನ್ನಡಿಗರ ಸಂಪದ್ಭರಿತ ಪೂರ್ವ ಇತಿಹಾಸವನ್ನು ನೆನಪು ಮಾಡುವ ಮೂಲಕ ಏಕೀಕರಣದ ಆಶಯವನ್ನು ಕನ್ನಡಿಗರಲ್ಲಿ ಮತ್ತಷ್ಟು ಗಟ್ಟಿಗೊಳಿಸಿದರು. ಅವರ ಈ ಲೇಖನದಲ್ಲಿ 'ಕನ್ನಡನಾಡು ವೀರರ ಭೂಮಿ, ಊರು ಊರುಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ವೀರಗಲ್ಲುಗಳು, ಶಾಸನಗಳು ಇಂದಿಗೂ ಅವರ ಹುತಾತ್ಮ ಜೀವನದ ಹೆಜ್ಜೆಗಳನ್ನು ಎತ್ತಿ ಸಾರುತ್ತಿವೆ. ಹಾಗೂ ಕನ್ನಡ ಮಕ್ಕಳು ಪ್ರೋತ್ಸಾಹವಿಲ್ಲದೆ, ಬದುಕಿಗೆ ಮಾರ್ಗವಿಲ್ಲದೆ ತೊಳಲುತ್ತಿರುವಾಗ ಹೊರಗಿನವರು ಬಂದು ಉಂಡುಟ್ಟು ಹೋಗುತ್ತಿದ್ದಾರೆ. ಮನೆಯ ದೇವರು ಮಣ್ಣು ತಿನ್ನುವಾಗ ಮಾರಮ್ಮ ಮಂಡಿಗೆ ಬೇಡಿದಳು ಎಂಬ ಮಾತನ್ನ ಮನ್ನಿಸವಂತಾಗಿದೆ.[3] ಹೀಗೆ ಕನ್ನಡಿಗರಲ್ಲಿ ತಮ್ಮ ನಾಡಿನ ಬಗ್ಗೆ ಅಭಿಮಾನ ಬೆಳೆದು ಕನ್ನಡ ನಾಡಿನ ಸೇವೆ ಮೊದಲು ಮಿಕ್ಕೆಲ್ಲವೂ ಹಿಂದಿನಿಂದ ಬರಲಿ ಎಂಬ ಭಾವನೆ ಬೆಳೆದರೆ ಅಂದೇ ಕನ್ನಡನಾಡು ಚಿನ್ನದ ನಾಡಾಗುತ್ತದೆ ಎಂಬ ಅದ್ಭುತ ಕಲ್ಪನೆ ನೀಡಿ ಕನ್ನಡಿಗರ ಕಣ್ಣರಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. 'ಕನ್ನಡ ನಾಡು ಬೆಳೆದರೆ ಬಾಳಿದರೆ–ಬದುಕಿದರೆ–ಪುಷ್ಟವಾದರೆ ಭಾರತವೂ ಬದುಕುತ್ತದೆ. ಭಾರತ ಮತ್ತು ಕನ್ನಡನಾಡು, ತಾಯಿ ಮಕ್ಕಳು ಇದ್ದಂತೆ. ಮಗಳು ಮುಂದೆ ಬಂದು ಕೀರ್ತಿಗೊಂಡರೆ ತವರು ಮನೆ ಕೊರಗುತ್ತದೆಯೇ?[4] ಈ ಹೇಳಿಕೆಯು ಎಂತಹ ಕನ್ನಡಿಗನನ್ನು ಸಹ ಕನ್ನಡ ನಾಡಿನ ಒಗ್ಗೂಡಿಗೆ ಸ್ವಯಂ ಪೇರ್ರಿತನಾಗಿ ಭಾಗವಹಿಸಲು ಪ್ರೇರಣೆ ನೀಡುತ್ತದೆ.

ಕರ್ನಾಟಕಕ್ಕೆ ಬೇಕಾದುದೇನು? ಎಂಬ ಲೇಖನದಲ್ಲಿ ಕರ್ನಾಟಕ ಏಕೀಕರಣದ ಮಹಾ ಮಂತ್ರದ ಪಠಣ ಎಂಟು ದಶಕಗಳಿಂದ ಒಂದೇ ಸಮನಾಗಿ ನಡೆಯುತ್ತಿದೆ. ನೂರಾರು ಅಡ್ಡಿ ಆಂತಕ, ಎಲ್ಲಕಿಂತಲೂ ಮಿಗಿಲಾಗಿ ಕನ್ನಡಿಗರ ಅನಾಸಕ್ತಿ, ತಮ್ಮತಮ್ಮಲ್ಲಿಯೇ ಬಡಿದಾಟ ಹಾಗೂ 'ಕನ್ನಡ ನಾಡಿನ ನಾಯಕರ ಪರೀಕ್ಷಾ ಕಾಲವಿದು  ಅವರು ಅದರಲ್ಲಿ  ಗೆದ್ದು ಬರಬೇಕು ಇಡೀ ನಾಡೇ ತೆರೆದ ಕಣ್ಣುಗಳಿಂದ ಅವರ ಮುನ್ನೆಡೆಯನ್ನು ಗಮನಿಸುತ್ತಿದೆ. ಅಂದಿನ ನಾಯಕರ ವರ್ತನೆ ಹೇಗಿತ್ತು ಮತ್ತು ಅವರ ನಿಲುವು ಹೇಗಿರಬೇಕು ಎಂಬುದನ್ನು ತಿಳಿಸುವಲ್ಲಿ ಇವರ ಬರವಣಿಗೆಗಳು ಹೆಚ್ಚಿನ ಪ್ರಭಾವ ಬೀರಿತ್ತು. ಅಂದಿನ ನಾಯಕರಲ್ಲಿದ್ದ ಭಿನ್ನಾಭಿಪ್ರಾಯಗಳನ್ನು ಎತ್ತಿ ತೋರಿಸಿ, ಕನ್ನಡ ನಾಡಿಗಾಗಿ ಎಲ್ಲರೂ ಒಂದಾಗಬೇಕು. ನಿಮ್ಮ ಎಲ್ಲಾನಿರ್ಧಾರಗಳನ್ನು ಇಡೀ ನಾಡು ಗಮನಿಸುತ್ತಿದೆ ಎಂದು ನಾಯಕರಿಗೆ ಸಲಹೆ ನೀಡಿ ಒಗ್ಗಟ್ಟಿನ ಮಂತ್ರ ತಿಳಿಸಿದರು.

ಅ.ನ.ಕೃ ರವರು ತಮ್ಮ ಬರವಣಿಗೆಯಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ಸಿಗೆ ಒಂದು ಮಾತು ಎಂಬ ಲೇಖನದಲ್ಲಿ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿ ಕನ್ನಡ ಗಡಿನಾಡುಗಳಲ್ಲಿ ಇಲ್ಲದ ಕೋಲಾಹಲವನ್ನೇಬ್ಬಿಸುವ ಆಂದ್ರ, ಮಹಾರಾಷ್ಟ್ರ, ತಮಿಳು ಕಾಂಗ್ರೆಸ್ಸಿಗರ ಮೇಲೆ ಶಿಸ್ತಿನ ಕಾರ್ಯಕ್ರಮ ಕೈಗೊಳ್ಳಬೇಕು. ಸಮಿತಿ ಕರ್ನಾಟಕದ ಹಿತವನ್ನು ದುರ್ಲಕ್ಷಿಸುತ್ತಿಲ್ಲ ಎಂಬುದನ್ನು ತೋರಿಸಿಕೊಡಬೇಕು. 'ಭಾರತ ಸ್ವಾತಂತ್ರ್ಯ ಸಮರದಲ್ಲಿ ಈ ವರೆಗೆ ಕರ್ನಾಟಕ ಮಾಡಿರುವ ಸೇವೆಗೆ ಇಷ್ಟು ಗೌರವ, ರಕ್ಷಣೆ ಭಾರತ ಕಾಂಗ್ರೆಸ್ಸಿನಿಂದ ಕರ್ನಾಟಕಕ್ಕೆ ದೊರೆಯದಿದ್ದರೆ ಅದು ಕರ್ನಾಟಕದ ಗೌರವವನ್ನು ಕಳೆದುಕೊಳ್ಳುವ ದುರ್ಬರ ಪ್ರಸಂಗ ಬಂದಿತೇಂದು ನಾವು ಎಚ್ಚರಿಸದಿರಲಾರೆವು.' ಎಂದು ಇಂತಹ ಹಲವು ಸಂದರ್ಭಗಳಲ್ಲಿ ಅನೇಕ ಲೇಖನ ಮತ್ತು ಬರಹಗಳ ಮೂಲಕ ಹೋರಾಟಗಾರರಿಗೆ ಮತ್ತು ಕನ್ನಡಿಗರಿಗೆ ಹೋರಾಟಕ್ಕೆ ಉತ್ತಮವಾದ ಪಥ ಯಾವುದೇಂಬ ಸತ್ಯವನ್ನು ತಿಳಿಸಿ ಕನ್ನಡಿಗರ ಮನಗೆದ್ದರು. ಅ.ನ.ಕೃ ರವರು ಕರ್ನಾಟಕಕ್ಕೆ ಹೊರ ಪ್ರದೇಶಗಳಿಂದ ಬಂದಿದ್ದ ಅನ್ಯಭಾಷಿಕರಿಗೆ ಹೊರಗಿನವರಿಗೆ ಒಂದು ಹಿತೋಕ್ತಿ ಎಂಬ ಲೇಖನದ ಮೂಲಕ ಎಚ್ಚರಿಕೆ ನೀಡಿ ಕರ್ನಾಟಕದ ಹಿರಿಮೆಯನ್ನು ಎತ್ತಿ ಇಡಿದಿದ್ದಾರೆ. ಮಹಾರಾಷ್ಟ್ರ , ಕೇರಳ, ಆಂದ್ರ, ತಮಿಳುನಾಡುಗಳಿಂದ ಹೊಟ್ಟೆ ಪಾಡಿಗಾಗಿ ಬಂದರು, ನೌಕರಿ ಮಾಡಿದರು, ವ್ಯಪಾರ ಮಾಡಿದರು, ಹೊಟ್ಟೆ ತುಂಬಿ ಕೊಂಡು , ನಾವು ಇದಕ್ಕಾಗಿ ವಿಷಧಿಸುವುದಿಲ್ಲ. ಕನ್ನಡತಾಯಿ ಈ ಜನಕ್ಕೆ ಅನ್ನವಿಟ್ಟಿದಾಳೆ ಆದರೆ ಈ ಜನ ಕನ್ನಡ ತಾಯಿಗೆ ದ್ರೋಹವೆನ್ನಸಗಬಾರದು. ಕನ್ನಡಕ್ಕೆ ವಿರುದ್ದವಾದ ಯಾವ ಚಳುವಳಿಯನ್ನು ಹೂಡಬಾರದು, ತಾವೂ ಕನ್ನಡಿಗರೆಂದು ಭಾವಿಸಬೇಕು ಎಂದು  ಕಿವಿ ಮಾತು ಹೇಳಿ ಉಲ್ಲಂಘಿಸಿದರೆ ಹೊರಗಿನವರು ಕರ್ನಾಟಕ ಬಿಟ್ಟು ತೊಲಗಿ ಎಂಬುದು ಕನ್ನಡಿಗರ ರಣಗೀತೆಯಾಗುತ್ತದೆ. ಎಂದು  ತಮ್ಮ ಕಟು ಮಾತುಗಳಿಂದಲೇ ಎಚ್ಚರಿಕೆ ನೀಡಿ ಕನ್ನಡ ನಾಡು ಕಟ್ಟಲು ಎಲ್ಲರೂ ಒಂದುಗೂಡಿ ಎಂಬ ಚಿಂತನೆಯನ್ನು ಇಡೀ ಕರ್ನಾಟಕಕ್ಕೆ ತಮ್ಮ ಬರಹದ ಮೂಲಕ ತಲುಪಿಸಿ ಹೋರಾಟಕ್ಕೆ ಅಣಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಏಕೀಕೃತ ಕರ್ನಾಟಕವನ್ನಾಗಿಸಬೇಕು ಎಂಬ ಉತ್ಕೃಷ್ಟ ಭಾವನೆ ಅ.ನ.ಕೃ ರವರದ್ದು. ಇಂತಹ ಭಾವನೆಗಳಿಂದ ಕೂಡಿದ ಇವರ ಬರಹಗಳು ಪರಿಣಾಮಕಾರಿಯಾದ ಪ್ರಭಾವ ಬೀರಿ ಕರ್ನಾಟಕ ಏಕೀಕರಣಕ್ಕೆ ಹೆಜ್ಜೆಯಾದವು. ಅಂದು ಮೈಸೂರಿಗರು ತಮ್ಮ  ದೃಷ್ಟಿಯನ್ನು ವಿಸ್ತರಿಸಿ ಕರ್ನಾಟಕ ಭಾವನೆಯನ್ನು ಬೆಳೆಸಿಕೊಳ್ಳುವುದರ ದಿನಗಳು ಬಂದಿವೆ, ಮೈಸೂರು ಸಂಘಗಳು ಕರ್ನಾಟಕದ

ಸಂಘಗಳಾಗಬೇಕು. ಸಾಹಿತ್ಯ, ರಾಜಕೀಯ, ವ್ಯಾಪಾರಗಳೆಲ್ಲವೂ ಮೈಸೂರು ಕರ್ನಾಟಕದ ಇತರ ಭಾಗಗಳೊಂದಿಗೆ ನಿಕಟವಾದ ಸಂಬಂಧವನ್ನು ಪೋಷಿಸಿಕೊಂಡು ಬಂದಿದೆ. ಇಂದಲ್ಲ ನಾಳೆಯಾದರೂ, ಮೈಸೂರಿನ ರಾಜಕೀಯ ವ್ಯಾಪ್ತಿಯು ವಿಸ್ತರಿಸಿ ಅದು ಎಲ್ಲ ರೀತಿಯಲ್ಲಿಯೂ ಕರ್ನಾಟಕವೇ ಆಗುವುದರ ಶುಭ ಸೂಚನೆಗಳೂ ಕಂಡು ಬರುತ್ತವೆ. ಎಂಬ ಆಶಯದ ಮೂಲಕ ಎಲ್ಲಾ ರಂಗದಲ್ಲೂ ಏಕೀಕರಣ ಮಾಡುವ ಉದ್ದೇಶ ಹೊಂದಿ ಕನ್ನಡಿಗರನ್ನ ಎಚ್ಚರಗೊಳಿದರು. ಕರ್ನಾಟ ಪ್ರಾಂತ್ಯದಲ್ಲಿ ಮೈಸೂರನ್ನು ಸೇರಿಸಿದರೆ ಏಕೀಕರಣಕ್ಕೆ ಮತ್ತಷ್ಟು ಬಲ ಬರುತ್ತದೆ ಆದ್ದರಿಂದ ಅಖಿಲ ಕರ್ನಾಟಕ ಸ್ಥಾಪನೆಗಾಗಿ ಎಲ್ಲಾ ಭಾಗದ ಸಂಘ ಸಂಸ್ಥೆಗಳು ಒಗ್ಗೂಡಬೇಕು ಇದರಿಂದ ಕರ್ನಾಟಕ ಏಕೀರಣದ ಕನಸು ನನಸಾಗುವುದು ಖಚಿತ ಎಂಬ ದೃಢ ಸಂಕಲ್ಪವನ್ನು ಹೊಂದಿದ್ದರು.

ಸಂಯುಕ್ತ ಕರ್ನಾಟಕ ಸ್ಥಾಪನೆಗೆ ಕನ್ನಡನಾಡು ಎಲ್ಲ ದೃಷ್ಠಿಯಿಂದಲೂ ಒಂದಾಗಬೇಕು. ಅದರ ಸಾಂಸ್ಕೃತಿಕ ,ಆರ್ಥಿಕ, ರಾಜಕೀಯ, ಶೈಕ್ಷಣಿಕ ಗುರಿಗಳು ಒಂದಾಗಬೇಕು. ಕರ್ನಾಟಕದ ಎಲ್ಲಾ ರಾಜಕೀಯ ಪಕ್ಷಗಳು, ಜಾತಿ, ಮತಗಳು, ಸಮಾಜದ ಗಣ್ಯ ಅಗ್ರಗಣ್ಯ ಪುರುಷರು, ಪ್ರಸಿದ್ಧ ಸಾಹಿತಿಗಳು, ಕಲಾವಿದರು, ಒಗ್ಗಟ್ಟಾಗಿ ಅಖಿಲ ಕರ್ನಾಟಕದಲ್ಲಿ ನವಯುಗ ಸ್ಥಾಪಿಸುವುದಕ್ಕೆ ಅಸ್ತಿಭಾರ ಹಾಕಬೇಕು. ಎಂದು ಎಲ್ಲರಲ್ಲೂ ಕಳಕಳಿಯ ಮನವಿ ಮಾಡುತ್ತಾ ಚಳುವಳಿಗೆ ಪೂರಕವಾದ ಒಗ್ಗಟ್ಟ ಪ್ರದರ್ಶಿಸಲು ಕರೆ ನೀಡಿದರು. ಪ್ರತಿ ಊರು, ಹಳ್ಳಿಯಲ್ಲಿಯೂ ಕರ್ನಾಟಕ ಸಂಘಗಳನ್ನು ಸ್ಥಾಪಿಸಬೇಕು. ಸಂಘವನ್ನೇ ಎಲ್ಲಾ ಚಟುವಟಿಕೆಯ ಕೇಂದ್ರವನ್ನಾಗಿ ಮಾಡಿಕೊಂಡು ವಾಚನಾಲಯ, ಗ್ರಂಥಾಲಯಗಳ ಮೂಲಕ ಪ್ರತಿ ಕನ್ನಡಿಗರನ್ನು ಏಕೀಕರಣಕ್ಕಾಗಿ ಸಜ್ಜುಗೊಳಿಸುವ ಕೇಂದ್ರವಾದರೆ ಕರ್ನಾಟಕ ಏಕೀಕರಣದ ಕನಸು ನನಸಾಗುತ್ತದೆ. ಎಂದು ತಮ್ಮ ಆಶಯ ಸಲಹೆ, ಸೂಚನೆಗಳನ್ನು ಏಕೀರಣ ಹೋರಾಟದ ಸಂದರ್ಭದಲ್ಲಿ ಕನ್ನಡಿಗರಿಗೆ ನೀಡಿ ಕರ್ನಾಟಕದ ಏಕೀಕರಣದ ಬಹಳ ಉತ್ಸುಕರಾಗಿದ್ದರು.

ಉಪಸಂಹಾರ

ಹೀಗೆ ಅ.ನ.ಕೃಷ್ಣರಾಯರು ತಮ್ಮ ವೈವಿಧ್ಯಮಯ ಬರಹಗಳಿಂದ ಕನ್ನಡ ಸಾಹಿತ್ಯದಲ್ಲಿ ಎಲ್ಲಾ ರಂಗದಲ್ಲೂ ಕೃಷಿ ಮಾಡಿ, ಹಲವು ಪತ್ರಿಕೆಗಳ ಸಂಪಾದಕರಾಗಿ ಲೇಖನಗಳನ್ನು ಅಂದಿನ ಪ್ರಚಲಿತದಲ್ಲಿದ್ದ ಹಲವು ಘಟನೆಗಳ ಬಗ್ಗೆ ಕನ್ನಡಿಗರಿಗರಲ್ಲಿ ಅರಿವು ಮೂಡಿಸುತ್ತಿದ್ದರು. ಅಂದು ಪ್ರಚಲಿತದಲ್ಲಿದ್ದ ಕರ್ನಾಟಕ ಏಕೀಕರಣ ಹೋರಾಟದ ಸಂದರ್ಭದಲ್ಲಿ ಹೋರಾಟಕ್ಕೆ ಸಂಬಂದಿಸಿದ ಹಲವು ಘಟನೆಗಳ ಬಗ್ಗೆ ತಮ್ಮ ಲೇಖನ ಮತ್ತು ಭಾಷಣಗಳ ಮೂಲಕ ಕನ್ನಡಿಗರನ್ನು ಎಚ್ಚರಗೊಳಿಸಿ ತಮ್ಮ ಕನ್ನಡಿಗನ ಅಂತರಾಳದಲ್ಲಿ ಅಖಂಡ ಕರ್ನಾಟಕಕ್ಕಾಗಿ ಸಜ್ಜಾಗುವಂತೆ ಹುರುದುಂಬಿಸಿದರು. ಅದರಂತೆ ಹಲವು ಸಂಸ್ಥೆ ಮತ್ತು ನಾಯಕರುಗಳಿಗೆ ಕರ್ನಾಟಕಕ್ಕಾಗಿ ಯಾವ ರೀತಿಯ ನಿಲುವು ತೆಗೆದು ಕೊಳ್ಳಬೇಕು ಎಂಬುದನ್ನು ತಿಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಕೊನೆಟಿಪ್ಪಣಿಗಳು

1. ಕನ್ನಡದ ದಾರಿ ಮತ್ತು ಅಖಂಡ ಕರ್ನಾಟಕ, ಪು.ಸಂ.120
2. ಅದೇ. ಪು.ಸಂ.120
3. ಕನ್ನಡ ನುಡಿ ಪತ್ರಿಕೆ
4. ಪೌರವಾಣಿ ಪತ್ರಿಕೆ

**ಪರಾಮರ್ಶನ ಗ್ರಂಥಗಳು**


- ಗೋಪಾಲರಾವ್ ಹೆಚ್ ಎಸ್. (2020). *ಕರ್ನಾಟಕ ಏಕೀಕರಣ ಇತಿಹಾಸ.* ನವಕರ್ನಾಟಕ ಪ್ರಕಾಶನ.
- ಕನ್ನಡ ನುಡಿ ಪತ್ರಿಕೆ. (1938).
- ಕೃಷ್ಣರಾಯ ಅ.ನ. (1946). *ಕನ್ನಡದ ದಾರಿ ಮತ್ತು ಅಖಂಡ ಕರ್ನಾಟಕ.* ಸಾಗರ್ ಪ್ರಕಾಶನ.
- ಪೌರವಾಣಿ ಪತ್ರಿಕೆ. (1945).
- ಶ್ರೀನಿವಾಸಮೂರ್ತಿ ಕಾ.ವೆಂ. (ಸಂ.) (2021) *ಕನ್ನಡ ಸಾಹಿತ್ಯ ಮತ್ತು ಕರ್ನಾಟಕತ್ವ.* ಕರ್ನಾಟಕ ಸಾಹಿತ್ಯ ಅಕಾಡೆಮಿ.